**ಓ ಎಸ ನಂ. 741/2025**

**ಪಿಡಬ್ಲ್ಯು–1**

**ದಿನಾಂಕ 14-07-2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿಯ ಪರವಾಗಿ ಶ್ರೀ. ಎಮ್ ಎಮ್ ಕೆ ವಕೀಲರರಿಂದ**

1. ನನಗೆ ಈಗ 77 ವರ್ಷ ವಯಸ್ಸು ಇರುತ್ತದೆ. ನಾನು ಶೇತ್ಕಿ ಕೆಲಸ ಮಾಡುತ್ತೇನೆ. ಈ ದಾವೆಯನ್ನು ನಾನು ಪ್ರತಿವಾದಿಯ ವಿರುದ್ಧ ಸಲ್ಲಿಸಿರುತ್ತೇನೆ. ನಾನು ನವಲೂರಿನಲ್ಲಿ ಜಮೀನು ಮಾಡಿಕೊಂಡ ಕಾರಣ ಪ್ರತಿವಾದಿ ಪರಿಚಯ ಇರುತ್ತಾನೆ. ನಾನು ಕಳೆದ ಐದಾರು ವರ್ಷಗಳಿಂದ ನವಲೂರಿನಲ್ಲಿ ಜಮೀನನ್ನು ಮಾಡಿಕೊಳ್ಳುತ್ತಿದ್ದೇನೆ. ನನ್ನ ಖುದ್ದ ಊರು ಮಮ್ಮಿಗಟ್ಟಿ . ಮಮ್ಮಿಗಟ್ಟಿಯಿಂದ ನವಲೂರು 15 ಕೀಮೀ ಆಗುತ್ತದೆ. ಅದು 20 ಕೀಮೀ ಮೇಲೆ ಇದೆ ಎಂದರೆ ಸರಿ. ನಾನು ನವಲೂರಿಗೆ ಪ್ರತಿದಿನ ಹೋಗಿ ಬರುವುದು ಮಾಡುವುದಿಲ್ಲ, ಅಲ್ಲಿ ನನ್ನ ಮಗಳು ವಾಸವಾಗಿರುತ್ತಾಳೆ. ಈಗಲೂ ಸಹ ನಾನು ನವಲೂರಿನಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ನವಲೂರಿನಲ್ಲಿ ಯಾರ ಜಮೀನನ್ನು ಮಾಡಿಕೊಂಡಿದ್ದೇನೆ ಎಂದು ನನಗೆ ಹೇಳಲು ಬರುವುದಿಲ್ಲ. ನವಲೂರಿನಲ್ಲಿ ಎಳೆಂಟು ವರ್ಷಗಳವರೆಗೆ ಜಮೀನನ್ನು ಮಾಡಿಕೊಂಡಿದ್ದೆನು. ನವಲೂರಿನಲ್ಲಿ ಜಮೀನನ್ನು ಮಾಡಿಕೊಂಡಿರುತ್ತೇನೆ ಎಂದು ತೋರಿಸಲು ಕಾಗದ ಪತ್ರಗಳನ್ನು ಹಾಜರು ಪಡಿಸಿರುವುದಿಲ್ಲ.

2. ದಾವಾ ಆಸ್ತಿಯ ನಂಬರ್ ನ್ನು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯ ಚೆಕಬಂದಿಯನ್ನು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯನ್ನು ನಾನು 4–5 ವರ್ಷಗಳ ಹಿಂದೆ ನೋಡಿರುತ್ತೇನೆ. ದಾವಾ ಜಮೀನು ಮಸಾರಿ ಜಮೀನೋ ಅಥವಾ ಕೆಂಪು ಭೂಮಿಯ ಜಮೀನೋ ಎಂದರೆ ಮಸಾರಿ ಜಮೀನು ಇರುತ್ತದೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದಾವಾ ಆಸ್ತಿಯನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು 1 ಗುಂಟೆ ಜಮೀನು ಖರೀದಿ ಆಗದ ಕಾರಣ ನೋಂದು ಮಾಡಿಸುವ ಸಲುವಾಗಿ ಮಾಡಿರುತ್ತೇನೆ. ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ನಾನು ಎಷ್ಟು ಹಣ ಕೊಟ್ಟಿರುತ್ತೇನೆ ಎಂದು ಕಾಗದದಲ್ಲಿ ಬರೆಸಿರುತ್ತೇನೆ ಎಂದರೆ ಆಗಾಗ ಹಣವನ್ನು ಕೊಟ್ಟು ರೂ. 2,80,000/– ಹಣವನ್ನು ಕೊಟ್ಟಿರುತ್ತೇನೆ. ನಾನು ಪ್ರತಿವಾದಿಗೆ ಯಾವುದೇ ಹಣ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

3. ಆ ಹಣವನ್ನು ಕೊಡುವ ಸಮಯದಲ್ಲಿ ನಾನು ಮತ್ತು ಪ್ರತಿವಾದಿ ಇಬ್ಬರೇ ಇದ್ದೆವು. ಆ ಕಾಗದವನ್ನು ನಾವು ಇಬ್ಬರೇ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಅದಕ್ಕೆ ಯಾರೂ ಸಾಕ್ಷಿದಾರರು ಇರುವುದಿಲ್ಲ ಎಂದರೆ ಸರಿ. ಪೂರ್ತಿ ಹಣವನ್ನು ಮುಟ್ಟಿದೆ ಎಂದು ಕಾಗದದಲ್ಲಿ ಬರೆಸಿದ್ದರೂ ಯಾವ ಕಾರಣಕ್ಕಾಗಿ ಖರೀದಿ ಪತ್ರವನ್ನು ಬರೆಸಿಕೊಂಡಿರುವುದಿಲ್ಲ ಎಂದರೆ ಆ ಪ್ರಶ್ನೆ ನನಗೆ ಅರ್ಥವಾಗುತ್ತಿಲ್ಲ. ವ್ಯವಹಾರ ಆದರೆ ಸಾಮಾನ್ಯವಾಗಿ ಖರೀದಿ ಪತ್ರ ಮಾಡಿಕೊಳ್ಳುತ್ತಾರೆ ಎಂದರೆ ಸರಿ. ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯು ಪ್ರತಿವಾದಿಗೆ ಹೇಗೆ ಬಂತು ನಾನು ಕಾಗದಗಳನ್ನು ನೋಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯು ಪ್ರತಿವಾದಿಗೆ ರಾಜೀ ಡಿಕ್ರಿ ಮುಖಾಂತರ ಬಂದಿರುತ್ತದೆ ಎಂದು ಹೇಳಿ ಬರೆಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ದಾವಾ ಆಸ್ತಿಯ ಚೆಕಬಂದಿಯನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಹಳೆಯ ಓ ಎಸ್ ನಂ. 170/2015 ನ್ನು ನವಲೂರಿನ ವಕೀಲರು ನಡೆಸುತ್ತಿದ್ದರು ಎಂದರೆ ಸರಿ. ನಾನು ಕಬ್ಜಾ ರಹಿತ ಕರಾರು ಪತ್ರ ಮಾಡಿಸಿಕೊಂಡಿರುತ್ತೇನೆ ಎಂದು ದಾವೆಯಲ್ಲಿ ಬರೆಸಿದ್ದು ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಪೂರ್ತಿ ವ್ಯವಹಾರ ಆದಾಗ ಜಮೀನಿನ ಕಬ್ಜೆಯನ್ನು ತೆಗೆದುಕೊಳ್ಳುತ್ತಾರೆ ಎಂದರೆ ಸರಿ. ಭೂ ಕಂದಾಯದ ನಿಯಮಗಳ ಪ್ರಕಾರ 1 ಗುಂಟೆ ಜಮೀನನ್ನು ಖರೀದಿ ಮಾಡಲು ಬರುವುದಿಲ್ಲ ಎಂದರೆ ಸರಿ. ಅದೇ ರೀತಿ 1 ಗುಂಟೆ ಜಮೀನನ್ನು ವ್ಯವಸಾಯ ಮಾಡಲು ಬರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ 1 ಗುಂಟೆ ಜಮೀನನ್ನು ಮನೆ ಕಟ್ಟುವ ಸಲುವಾಗಿ ತೆಗೆದುಕೊಂಡಿರುತ್ತೇನೆ ಎಂದು ಹೇಳುತ್ತಾರೆ. ನಿಪಿ.1 ರ ಕಾಗದವನ್ನು ಇವತ್ತೇ ನೋಡುತ್ತಿದ್ದೇನೆ ಎಂದರೆ ಸರಿ. ಪಹಣಿ ಪತ್ರಿಕೆಯನ್ನು ಇವತ್ತೇ ನೋಡುತ್ತಿದ್ದೇನೆ ಎಂದರೆ ಸರಿ. ದಾವೆಯನ್ನು ತಯಾರಿಸಲು ಮಾಹಿತಿ ಕೊಟ್ಟರು ಎಂಬ ಪ್ರಶ್ನೆಗೆ ಸಾಕ್ಷಿಯು ಉತ್ತರ ಕೊಟ್ಟಿರುವುದಿಲ್ಲ. ದಾವೆಯ ಬಗ್ಗೆ ನನಗೆ ಮಾಹಿತಿ ಇರದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

ಓ ಎಸ ನಂ. 741/2025

ಪಿಡಬ್ಲ್ಯು –1

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು

ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.